ಅಹರ್ನಿಶಂ ಜಾಗರಣೆಯಂ ಲೋಕಹಿತಂ ಮಮ ಕರಣೀಯಂ

ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ವಾರಾಣಸಿಯಲ್ಲಿ ಇತ್ತೀಚೆಗೆ ಪ್ರಧಾನಿ ಮೋದಿಯವರಿಂದ ಉದ್ಘಾಟನೆಗೊಂಡ 'ರುದ್ರಾಕ್ಷ' ಅಂತರರಾಷ್ಟ್ರೀಯ ಸಹಕಾರ ಮತ್ತು ಸಮ್ಮೇಳನ ಸಭಾಂಗಣ. 1200 ಜನರು ಕುಳಿತುಕೊಳ್ಳುವ ಸಾಮರ್ಥ್ಯದ ಎರಡು ಅಂತಸ್ತಿನ ಈ ಕಟ್ಟಡದಲ್ಲಿ 108 ರುದ್ರಾಕ್ಷಗಳಿವೆ.


ಸಂಪುಟ : 42 ಸಂಚಿಕೆ : 24 ಪ್ಲವ – ಆಷಾಢ ಕಲಿಯುಗಾಬ್ದ 5123 01-08-2021 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4



# ಕೃಷಿಯಿಂದ ಕೃಷಿ ಉದ್ದಿಮೆಯತ್ತ– ಹೊಸ ಪ್ರಯೋಗಗಳ ಯಶೋಗಾಥೆ

ರಾಜಧಾನಿ ದೆಹಲಿಯಲ್ಲಿ ಹಲವು ತಿಂಗಳುಗಳಿಂದ ನಡೆಯುತ್ತಿರುವ ರೈತರ ಪ್ರತಿಭಟನೆಯ ಅಸಲಿಯತ್ತು ಏನೇ ಇರಲಿ, ರೈತರ ಆದಾಯದ ಸಮಸ್ಯೆ ಅನೇಕ ವರ್ಷಗಳಿಂದ ರೈತರನ್ನು ಕಾಡುತ್ತಿರುವ ಸಮಸ್ಯೆಯಂತೂ ಹೌದು ಅನ್ನುವುದು ನಿರ್ವಿವಾದವಾದ ಸಂಗತಿಯಾಗಿದೆ. ಹಳ್ಳಿ ಕಡೆಯ ಆರ್ಥಿಕತೆಯ ವಾಸ್ತವತೆ ಏನೆಂದರೆ ವರ್ಷದಿಂದ ವರ್ಷಕ್ಕೆ ಕೃಷಿಯಿಂದ ಸಿಗುವ ಆದಾಯ ಕಡಿಮೆಯಾಗುತ್ತಿದೆ, ವೆಚ್ಚ ಹೆಚ್ಚಾಗುತ್ತಿದೆ. ಇದರಿಂದ ರೈತರ ಆದಾಯ ಕ್ಷೀಣಿಸಿ ಸಾಲಬಾಧೆ ಹೆಚ್ಚಾಗುತ್ತಿದೆ. ವ್ಯವಸಾಯ ಮಾಡುವುದೇ ಅಸಾಧ್ಯವೆನ್ನುವಷ್ಟರ ಮಟ್ಟಿಗೆ ಪರಿಸ್ಥಿತಿ ಇದೆ. ಇನ್ನೊಂದು ಕಡೆ ಗ್ರಾಹಕ ವರ್ಗದಲ್ಲಿ ಆರೋಗ್ಯದ ಸಮಸ್ಯೆ ಹೆಚ್ಚುತ್ತಿದ್ದು, ಇದರಿಂದಾಗಿ ಆಹಾರದ ಬಗೆಗೆ ಕಾಳಜಿ ಅನಿವಾರ್ಯವಾಗಿ ಹೆಚ್ಚುತ್ತಿದೆ. ಅದರಲ್ಲೂ ಸಾಂಪ್ರದಾಯಿಕ ತಿನಿಸುಗಳು, ಹಣ್ಣು ಮತ್ತು ಅದರ ಉತ್ಪನ್ನಗಳು, ಸಕ್ಕರೆ ಕಡಿಮೆ ಇದ್ದು ನಾರಿನ ಅಂಶ ಹೆಚ್ಚಿರುವ ಆಹಾರ ವಸ್ತುಗಳ ಬಗ್ಗೆ ಆಸಕ್ತಿ ಹೆಚ್ಚಾಗುತ್ತಿದೆ.

ಇವೆರಡೂ ವಿಚಾರಗಳನ್ನು ಅವಲೋಕಿಸಿದಾಗ ಒಂದು ವಿಚಾರ ಸ್ಪಷ್ಟವಾಗುತ್ತದೆ. ಅದೇನೆಂದರೆ ಗ್ರಾಹಕನಿಗೆ ಬೇಕಿರುವುದನ್ನು ಒದಗಿಸುವುದರಲ್ಲಿ ರೈತ ವರ್ಗ ಹಿಂದೆ ಬಿದ್ದಿದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಹೊಸ ಆಹಾರೋತ್ಪನ್ನ ಉದ್ದಿಮೆ ಆರಂಭಿಸಲು ಸಾಕಷ್ಟು ಅವಕಾಶ ಈಗ ಸೃಷ್ಟಿಯಾಗಿದೆ. ಈ ಹಿಂದೆಯೇ ಹಲವಾರು ತಜ್ಞರು ಈ ಬಗ್ಗೆ ಸಲಹೆ ಕೊಟ್ಟಿದ್ದರೂ ಅಂತಹ ಬದಲಾವಣೆಗೆ ಬಲ ಬಂದಿರಲಿಲ್ಲ. ಈಗ ಕಳೆದೆರಡು ವರ್ಷಗಳಿಂದ ಮನುಕುಲವನ್ನು ಬಾಧಿಸುತ್ತಿರುವ ಕೋರೋನಾ ವೈರಸ್ ನಿಂದಾಗಿ ಈ ನಿಟ್ಟಿನಲ್ಲಿ ಕೆಲವೊಂದು ಅನಿರೀಕ್ಷಿತ ಬದಲಾವಣೆಗಳೂ ಆಗಿರುವಂತೆ ಕಾಣಿಸುತ್ತಿದೆ. ಅದರಲ್ಲೂ ಕೃಷಿ ವಿಚಾರಕ್ಕೆ ಬಂದರೆ ರೈತರು ತಮ್ಮ ಉತ್ಪನ್ನಗಳನ್ನು ನೋಡುವ ದೃಷ್ಟಿಕೋನ ನಿಧಾನವಾಗಿ ಬದಲಾಗುತ್ತಿದೆ ಎಂದೇ ಹೇಳಬಹುದು. ಕೃಷಿ ಎಂದರೆ ಕೇವಲ ಬೆಳೆ ಬೆಳೆದು ಅದನ್ನ ಮಂಡಿಗೆ ಮಾರಾಟ ಮಾಡುವುದು ಅನ್ನುವ ಭಾವನೆ ಬದಲಾಗಿ ಕೃಷಿ ಅಂದರೆ ಗ್ರಾಹಕರಿಗೆ ಆಹಾರ ಒದಗಿಸುವ ಉದ್ದಿಮೆ ಎನ್ನುವ ಭಾವನೆ ಬರುತ್ತಿದೆ. ಎಲ್ಲ ಕಡೆ ಈ ಬದಲಾವಣೆ ಕಾಣಿಸದಿದ್ದರೂ ಅಲ್ಲೊಂದು ಇಲ್ಲೊಂದು ಉದಾಹರಣೆಗಳು ಇಂತಹ ಬದಲಾವಣೆಯನ್ನು ಇನ್ನಷ್ಟು ಬಲಪಡಿಸುವ ಆಶಾಭಾವನೆ ಹುಟ್ಟಿಸುತ್ತಿವೆ. ಅಂತಹ ಕೆಲವು ನಿದರ್ಶನಗಳ ಬಗ್ಗೆ ಬೆಳಕು ಚೆಲ್ಲುವ ಒಂದು ಪ್ರಯತ್ನ ಇಲ್ಲಿದೆ.

## ಆಗ್ರಾ ಪೇಟವಾದ ಕುಂಬಳಕಾಯಿ

ಕೋರೋನ ಕಾಲದಲ್ಲಿ ಎರಡು ವಿಚಾರಗಳಲ್ಲಿ ಆಗಿರುವ ಬೆಳವಣಿಗೆಯು ಆಸಕ್ತಿದಾಯಕವಾಗಿದೆ. ಒಂದು – ಶಿವಮೊಗ್ಗ ಕಡೆ ಬೆಳೆಯಲಾಗುತ್ತಿದ್ದ ಬೂದುಕುಂಬಳಕಾಯಿಯ ಮೌಲ್ಯವರ್ಧನೆ. ಇನ್ನೊಂದು ಬಾಳೆಕಾಯಿಯ ಮೌಲ್ಯವರ್ಧನೆ. ಬೂದುಕುಂಬಳಕಾಯಿಯ ವಿಚಾರ ನೋಡುವುದಾದರೆ ಇದು ಆ ಪ್ರದೇಶದಲ್ಲಿ ಮೊದಲೇ ಬೆಳೆಯಲಾಗುತ್ತಿದ್ದ ಬೆಳೆ. ಅದನ್ನು ಉತ್ತರ ಪ್ರದೇಶದ ಆಗ್ರಾದ ವರ್ತಕರು ಖರೀದಿ ಮಾಡುವುದು ರೂಢಿಯಾಗಿತ್ತು. ಅವರು ಅದರಿಂದ ಬಹಳ ಪ್ರಸಿದ್ಧವಾದ "ಆಗ್ರಾ ಪೇಟ" ಅನ್ನುವ ಸಿಹಿತಿಂಡಿಯನ್ನು ತಯಾರಿಸುತ್ತಿದ್ದರು. ಆದರೆ ಕಳೆದ ಬಾರಿಯ ಕೋರೋನ ಸಂಕಷ್ಟದಿಂದಾಗಿ ವರ್ತಕರು ಕುಂಬಳಕಾಯಿ ಖರೀದಿಯನ್ನು ನಿಲ್ಲಿಸಿದ್ದರು. ಇಂತಹ ಮಾರುಕಟ್ಟೆ ಸ್ಥಗಿತ ಸಮಯದಲ್ಲಿ ಹೊಸ ಪ್ರಯೋಗವೊಂದು ನಡೆಯಿತು. ಅದೇನೆಂದರೆ ಆಗ್ರಾ ಪೇಟವನ್ನು ಸ್ಥಳೀಯವಾಗಿಯೇ ತಯಾರಿಸುವುದು.



ಸಾಕಷ್ಟು ಆರಂಭಿಕ ವಿಘ್ನಗಳ ಹೊರತಾಗಿಯೂ ಈ ಪ್ರಯೋಗ ಯಶಸ್ವಿಯಾಯಿತು. ರುಚಿಕರವಾದ ಪೇಟವನ್ನು ತಯಾರಿಸುವುದರಲ್ಲಿ ಸಫಲರಾದರು. ಅಂತಹ ಸಿಹಿ ತಿನಿಸಿಗೆ ಸ್ಥಳೀಯ ಮಾರುಕಟ್ಟೆಯಲ್ಲಿ ಸಾಕಷ್ಟು ಬೇಡಿಕೆಯೂ ಬಂತು. ಅಂತೂ ದೊಡ್ಡ ಮಟ್ಟದ ನಷ್ಟ ಅನುಭವಿಸಬೇಕಾಗಿದ್ದ ಕುಂಬಳಕಾಯಿ ಬೆಳೆಗಾರರಿಗೆ ಇದರಿಂದ ಸ್ವಲ್ಪ ಅನುಕೂಲವೂ ಆಗಿತ್ತು.

## ಬಾಕಾಹು

ಅದೇ ರೀತಿ ಈ ವರ್ಷದ ಕೋರೋನಾ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಬಾಳೆಹಣ್ಣಿನ ಬೇಡಿಕೆ ನೆಲಕಚ್ಚಿತ್ತು. ಆ ಸಂದರ್ಭದಲ್ಲಿ ಹುಟ್ಟಿಕೊಂಡದ್ದು "ಬಾಕಾಹು" (ಬಾಳೆ ಕಾಯಿ ಹುಡಿ) ಆಂದೋಲನ. ಅಂದರೆ ಬಾಳೆಕಾಯಿಯಿಂದಲೇ ಹುಡಿಯನ್ನು ತಯಾರಿಸಿ ಉಪಯೋಗಿಸುವುದು, ಮಾರುವುದು. ಬಾಳೆಕಾಯಿಯಲ್ಲಿ ಇರುವ ಪಿಷ್ಟದ ಅಂಶ ನಿಧಾನಕ್ಕೆ ಕರಗಿ ರಕ್ತಕ್ಕೆ ಸೇರುವಂಥದ್ದು. ಹಾಗಾಗಿ ಇದು ಆರೋಗ್ಯಕ್ಕೆ ಪೂರಕವಾದ ಆಹಾರ ಮತ್ತು ಇದರಲ್ಲಿ ಸಾಕಷ್ಟು ನಾರಿನಂಶವೂ ಇರುತ್ತದೆ. ಇದಲ್ಲದೆಯೇ ಬಾಕಾಹು ಉತ್ಪಾದಿಸಲು



ಸ್ಥಳೀಯವಾಗಿ ಲಭ್ಯವಿರುವ ಪರಿಕರಗಳೇ ಸಾಕು. ಹಾಗಾಗಿ ಬಾಳೆ ಬೆಳೆಗಾರರಿಗೆ ಮಾರಾಟವಾಗದೆ ಹಾಳಾಗುತ್ತಿದ್ದ ಬಾಳೆಕಾಯಿಗಳಿಂದ ಹುಡಿ ತಯಾರಿಸಿ ಮಾರುವ ಸಾಧ್ಯತೆ ತೆರೆದುಕೊಂಡಿತು. ಇವೆಲ್ಲ ಸಣ್ಣ ಪ್ರಯತ್ನಗಳಂತೆ ಕಂಡರೂ ಮುಂದಿನ ದಿನಗಳಲ್ಲಿ ದೊಡ್ಡದಾಗಿ ಬೆಳೆಯುವ ಸಾಧ್ಯತೆ ಹೊಂದಿರುವ ವಿಚಾರಗಳು.

## ಹಲಸಿನ ಮೌಲ್ಯವರ್ಧನೆ

ಹಲಸು ಒಂದು ಬಹೂಪಯೋಗಿ ಆಹಾರವಸ್ತು. ಹಲಸಿನಕಾಯಿಯಲ್ಲಿ ಹೆಚ್ಚು ನಾರಿನ ಅಂಶ ಇರುತ್ತದೆ. ಹಾಗಾಗಿ ಇದು ಉತ್ತಮ ತರಕಾರಿಯೂ ಹೌದು. ಹಣ್ಣಾದರೆ ರುಚಿಕಟ್ಟಾದ ಆರೋಗ್ಯಕರವಾದ ಹಣ್ಣೂ ಹೌದು. ಹಲಸಿನ ಬೀಜ ಕೂಡ ಅತಿ ಹೆಚ್ಚಿನ ಪ್ರೊಟೀನ್ ಅಂಶ ಹೊಂದಿರುವುದರಿಂದ ಅದು ಕೂಡ ಒಂದು ಉತ್ತಮ ಆಹಾರ ಮೂಲವೇ. ಹಿಂದೆ ಹಳ್ಳಿ ಕಡೆ, ಅದರಲ್ಲೂ ಮಲೆನಾಡಿನಲ್ಲಿ ಹಲಸಿನ ಖಾದ್ಯಗಳು ಮನೆಮಾತಾಗಿದ್ದವು. ಹಳ್ಳಿ ಸಂಸ್ಕೃತಿ ತೆರೆಮರೆಗೆ ಸರಿದು ನಗರೀಕರಣವಾದಂತೆ ಅಂತಹ ಹಲಸಿನ ಖಾದ್ಯಗಳು ಕೂಡ ಊಟದ ತಟ್ಟೆಯಿಂದ ಮರೆಯಾಗತೊಡಗಿದವು. ಅಂತಹ ಖಾದ್ಯಗಳ ಜನಪ್ರಿಯತೆ ಈಗ ನಿಧಾನಕ್ಕೆ ಮರುಕಳಿಸುತ್ತಿದೆ. ಇದು ಕೋರೋನಾ ಕಾಲಕ್ಕಿಂತ ದಶಕಗಳಿಗೂ ಮೊದಲಿನಿಂದಲೇ ನಡೆದ ಹಲಸು ಆಂದೋಲನದ ಪರಿಣಾಮವೂ ಹೌದು. ಖ್ಯಾತ ಕೃಷಿ ಮಾಧ್ಯಮವಾದ ಅಡಿಕೆ ಪತ್ರಿಕೆಯು ಹಲಸು ಉದ್ದಿಮೆ ಜನಪ್ರಿಯತೆಗಾಗಿ ಸಾಕಷ್ಟು ಶ್ರಮಿಸಿದೆ. ಮತ್ತು ಪತ್ರಕರ್ತರಾದ ಶ್ರೀ ಪಡ್ರೆಯವರೂ ಸೇರಿದಂತೆ ಹಲವಾರು ಹಲಸುಪ್ರಿಯರ ಶ್ರಮ ಇದರ ಹಿಂದೆ ಇದೆ. ಇದಕ್ಕಾಗಿ ಪ್ರತಿವರ್ಷ ಹಲಸು ಮೇಳಗಳ ಆಯೋಜನೆ, ಅದರಲ್ಲಿ ಹಲಸಿನ ಉತ್ಪನ್ನಗಳ ಪರಿಚಯ ಮತ್ತು ಮಾರಾಟ ಹಮ್ಮಿಕೊಳ್ಳಲಾಗಿತ್ತು. ದೇಶೀಯ ಮತ್ತು ವಿದೇಶೀಯ ಹಲಸು ಉದ್ದಿಮೆಗಳಿಗೆ ಭೇಟಿ ನೀಡಿ ವಿಸ್ತೃತ ವರದಿಗಳನ್ನು ಅಡಿಕೆ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು.



ಇಂತಹ ಅವಿರತ ಶ್ರಮದ ಕಾರಣ ಇಂದು ಸಣ್ಣ ಸಣ್ಣ ಪಟ್ಟಣಗಳ ಅಂಗಡಿ ಮಳಿಗೆಗಳಲ್ಲೂ ಹಲಸಿನ ಉತ್ಪನ್ನಗಳಾದ ಚಿಪ್ಸ್, ವರಟ್ಟಿ, ಹಲ್ವಾ, ಮಾಂಬಳ ಇತ್ಯಾದಿಗಳು ಸಿಗುತ್ತಿವೆ. ಇಂತಹ ಉತ್ಪನ್ನಗಳಲ್ಲಿ ಹೆಚ್ಚಿನವು ಗೃಹೋದ್ಯಮಗಳ ಮೂಲಕವೇ ಉತ್ಪಾದಿಸಿದಂತಹವುಗಳು ಅನ್ನುವುದು ಗಮನಾರ್ಹ. ಅಂದರೆ ಅಂತಹ ಕುಟುಂಬಗಳಿಗೆ ಇದು ಆದಾಯದ ಮೂಲವೂ ಹೌದು, ಬಳಕೆಯಾಗದೆ ಹಾಳಾಗುತ್ತಿದ್ದ ಹಲಸಿನ ಸದ್ಬಳಕೆಯೂ ಆಯ್ತು.

## ಬೇಲದಹಣ್ಣಿನ ಪಾನಕ, ಐಸ್ ಕ್ರೀಮ್, ಜಾಮ್

ಈ ಹಿಂದೆ ಕೃಷಿ ಮೇಳವೊಂದರಲ್ಲಿ ಭಾಗವಹಿಸಿದ್ದಾಗ ಅಲ್ಲಿಗೆ ಭೇಟಿ ಮಾಡಿದ ಕೃಷಿಕರೊಬ್ಬರ ಅನುಭವ ನನ್ನ ಗಮನ ಸೆಳೆಯಿತು. ಅವರು ತಮ್ಮ ಜಮೀನಿನಲ್ಲಿ ಸಾಕಷ್ಟು ಬೇಲದಹಣ್ಣಿನ ಮರಗಳ ಕೃಷಿ ಮಾಡಿದ್ದರು. ಆದರಿಂದ ಅವರಿಗೆ ಅಂತಹ ಆದಾಯವೇನೂ ಸಿಗುತ್ತಿರಲಿಲ್ಲ ಯಾಕೆಂದರೆ ಬೇಲದ ಹಣ್ಣಿಗೆ ದೊಡ್ಡ ಮರುಕಟ್ಟೆ ಇರಲಿಲ್ಲ. ಬೇರೆ ಬೆಳೆ ಬೆಳೆಯಲು ಆ ಭೂಮಿ ಸೂಕ್ತವಾಗಿರಲಿಲ್ಲ. ಈ ಮಧ್ಯೆ ಇವರು ಸ್ವಯಂಪ್ರೇರಿತರಾಗಿ ಹೊಸ ಯೋಜನೆಯೊಂದನ್ನು ಹಾಕಿಕೊಂಡರು. ಅದೇನೆಂದರೆ ಬೇಲದ ಹಣ್ಣನ್ನು ಮರುಕಟ್ಟೆಗೆ ಒಯ್ದು ಮಾರಾಟ ಮಾಡುವ ಬದಲಾಗಿ ಸ್ವತಃ ತಾವೇ ಬೇಲದ ಹಣ್ಣಿನ ಪಾನಕ ಮಾಡಿ ರಸ್ತೆ ಬದಿಯಲ್ಲಿ ಮಾರಾಟ ಮಾಡಿದರು. ಇದು ಅವರಿಗೆ ಉತ್ತಮ ಫಲಿತಾಂಶ ನೀಡಿತು. ಬೇಲದ ಹಣ್ಣು ಒಂದು ಬಹಳ ಆರೋಗ್ಯಕರವಾದ ಹಣ್ಣಾಗಿದ್ದು ಇದರ ಪಾನೀಯ ಪಾರಂಪರಿಕ ಹಿನ್ನೆಲೆ ಹೊಂದಿದೆ. ಆಧುನಿಕ ಕಾಲದಲ್ಲಿ ಇದರ ಬಳಕೆ ಅಪರೂಪವಾಗಿತ್ತು. ಈ ರೈತರ ಇಂತಹ ಪ್ರಯತ್ನದಿಂದಾಗಿ ಇಬ್ಬರಿಗೂ – ಅಂದರೆ ಉತ್ಪಾದಕ ರೈತನಿಗೂ ಲಾಭವಾಯ್ತು, ಇನ್ನೊಂದೆಡೆ ಆರೋಗ್ಯಕರ ಪೇಯದ ಪರಿಚಯದಿಂದಾಗಿ ಗ್ರಾಹಕನಿಗೂ ಲಾಭವಾಯ್ತು. ಇದು ಕೃಷಿ ಉದ್ದಿಮೆಗೆ ಇನ್ನೊಂದು ಅತಿ ಸರಳವಾದ, ಆದರೆ ಬಹಳ ಸೂಕ್ತವಾದ ಉದಾಹರಣೆ.

ಹಾಗೆಯೇ, ಕೆಲವು ಕೃಷಿಕರು ಬೇಲದ ಹಣ್ಣಿನ ಐಸ್ ಕ್ರೀಮ್ ಹಾಗೂ ಜಾಮ್ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ಮಾರುಕಟ್ಟೆಯಿಂದ ಉತ್ತಮ ಪ್ರತಿಕ್ರಿಯೆ ಕೂಡ ಸಿಗುತ್ತಿದೆ.

ವಿದೇಶಗಳಿಗೆ ಹೋಲಿಸಿದರೆ ನಮ್ಮಲ್ಲಿ ಬೆಳೆಯುವವರ ಮತ್ತು ಬಳಸುವವರ ನಡುವಿನ ಅಂತರ ಬಹಳ ಹೆಚ್ಚಿದೆ. ಇನ್ನಾದರೂ ಇದನ್ನು ಬದಲಾಯಿಸಬೇಕಿದೆ. ಆಹಾರ ಅನ್ನುವುದು ಮನುಷ್ಯನ ಮೂಲಭೂತ ಅವಶ್ಯಕತೆಯೂ ಹೌದು, ಆರೋಗ್ಯದ ದೃಷ್ಟಿಯಿಂದ ಬಹಳ ಪ್ರಮುಖವಾದ ವಿಚಾರವೂ ಹೌದು. ಕೃಷಿಕರ ಮತ್ತು ಗ್ರಾಹಕರ ಅಂತರ ಕಡಿಮೆಗೊಳಿಸಿ ಆಹಾರೋತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ತಲುಪಿಸುವ ವ್ಯವಸ್ಥೆ ಮಾಡಲು ಸಾಕಷ್ಟು ಅವಕಾಶಗಳೂ ಇವೆ. ಇದರಿಂದ ಇಬ್ಬರಿಗೂ ಲಾಭವೂ ಇದೆ ಅನ್ನುವುದು ಮೇಲಿನ ಕೆಲವು ಉದಾಹರಣೆಗಳಲ್ಲಿ ಸ್ಪಷ್ಟವಾಗುತ್ತಿದೆ. ಸಾವಯವ ಕೃಷಿಕರೆಲ್ಲ ಸೇರಿ ಇತ್ತೀಚೆಗೆ ಆರಂಭಿಸಿದ ಸುಭಿಕ್ಷಾ ಸಾವಯವ ಸಹಕಾರ ಸಂಘ ರೈತರ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ತಲುಪಿಸುವ ಪ್ರಯತ್ನಕ್ಕೆ ಕೈಹಾಕಿದೆ. ಇಂತಹ ಪ್ರಯತ್ನಗಳು ಇನ್ನಷ್ಟು ವಿಸ್ತರಿಸುವುದು ಇಂದಿನ ಅನಿವಾರ್ಯತೆಯಾಗಿದೆ.


**ಮಹೇಶ್ ಪ್ರಸಾದ್ ನೀರ್ಕಜೆ,** ಲೇಖಕರು ಬೆಂಗಳೂರಿನಲ್ಲಿ ಕೆಲವು ಕಾಲ ಸಾಫ್ಟ್ ವೇರ್ ಇಂಜಿನಿಯರ್ ಆಗಿ ಕೆಲಸ ಮಾಡಿ, ಬಳಿಕ ಹಳ್ಳಿಗೆ ಹೋಗಿ ಕೃಷಿಯಲ್ಲಿ ತೊಡಗಿಸಿಕೊಂಡವರು. ಪ್ರಸ್ತುತ, ಉಪ್ಪಿನಂಗಡಿ ನಿವಾಸಿ.

## ಸಂಸ್ಮರಣೆ

# ಗೊರೂರು ರಾಮಸ್ವಾಮಿ ಅಯ್ಯಂಗಾರ್ (04.07.1904 – 28.09.1991)

ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕನ್ನಡದ ಶ್ರೇಷ್ಠ ಸಾಹಿತಿ, ಅಪ್ರತಿಮ ಗಾಂಧೀವಾದಿ, ಸ್ವಾತಂತ್ರ್ಯ ಹೋರಾಟಗಾರ, ಅಸಮಾನತೆಗಳ ವಿರುದ್ಧ ಹೋರಾಡಿದ ಸಮಾಜ ಸೇವಕ ಮತ್ತು ಕರ್ನಾಟಕ ಏಕೀಕರಣಕ್ಕೆ ದುಡಿದವರು.

ಗೊರೂರು ರಾಮಸ್ವಾಮಿ ಅಯ್ಯಂಗಾರ್ 1904ರ ಜುಲೈ 4 ರಂದು ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಜನಿಸಿದರು. ಅವರ ತಂದೆ ಶ್ರೀನಿವಾಸ ಅಯ್ಯಂಗಾರ್. ತಾಯಿ ಲಕ್ಷ್ಮಮ್ಮ. ತಮ್ಮ ಹಳ್ಳಿಯಲ್ಲಿ ಲೋಯರ್ ಸೆಕೆಂಡರಿ ಶಿಕ್ಷಣವನ್ನುಮುಗಿಸಿದ ಅಯ್ಯಂಗಾರರು ಹಾಸನದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಗಾಂಧೀಜಿಯ ಅಸಹಕಾರ ಚಳುವಳಿಯಿಂದ ಆಕರ್ಷಿತರಾಗಿ ಶಿಕ್ಷಣಕ್ಕೆ ವಿದಾಯ ಹೇಳಿದರು. ಅನಂತರ ಅವರು ಗಾಂಧೀಜಿಯ ಆಶ್ರಮವನ್ನು ಸೇರಿ, ಗುಜರಾತಿನ ವಿದ್ಯಾಪೀಠದ ವಿದ್ಯಾರ್ಥಿಯಾದರು. ಬಳಿಕ ಮದ್ರಾಸಿನ 'ಲೋಕಮಿತ್ರ' ಮತ್ತು 'ಭಾರತಿ' ಪತ್ರಿಕೆಗಳ ಕನ್ನಡ ಸಮಾಚಾರ ಲೇಖಕರಾಗಿ ಸ್ವಲ್ಪಕಾಲ ಕೆಲಸ ಮಾಡಿ, ಕೆಂಗೇರಿಯ ಗುರುಕುಲಾಶ್ರಮವನ್ನು ಸೇರಿದರು. ಹರಿಜನೋದ್ಧಾರ ಅದರ ಮುಖ್ಯ ಕಾರ್ಯವಾಗಿತ್ತು. ಅದನ್ನು ಗೊರೂರರು ಶ್ರದ್ಧೆಯಿಂದ ನಿರ್ವಹಿಸಿದರು. ಆಮೇಲೆ ಬೆಂಗಳೂರಿನ ಅಖಿಲ ಭಾರತ ಚರಕ ಸಂಘದ ಖಾದಿ ವಸ್ತ್ರಾಲಯದ ಸಂಚಾಲಕರಾದರು. ಅಲ್ಲಿಯೇ ಅವರ ಸಾಹಿತ್ಯ ಸೇವೆ ಮೊದಲಾಯಿತು. 1933ರಲ್ಲಿ ಗೊರೂರರು ತಮ್ಮ ಗ್ರಾಮಕ್ಕೆ ಮರಳಿ, ಮೈಸೂರು ಗ್ರಾಮ ಸೇವಾಸಂಘವನ್ನು ಸ್ಥಾಪಿಸಿ, ಖಾದಿ ಪ್ರಚಾರ, ಹರಿಜನೋದ್ಧಾರ, ವಯಸ್ಕರ ಶಿಕ್ಷಣ, ಗ್ರಾಮ ಕೈಗಾರಿಕೆಗಳು ಮುಂತಾದ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿದರು. 1942ರ 'ಚಲೇ ಜಾವ್' ಚಳವಳಿಯಲ್ಲಿ ಅವರು ಭಾಗವಹಿಸಿ,



ತುರಂಗವಾಸವನ್ನು ಅನುಭವಿಸಿದರು. ಸ್ವಾತಂತ್ರ್ಯ ಬಂದ ಮೇಲೆ ಮೈಸೂರಿನಲ್ಲಿ ಪ್ರಜಾ ಸರ್ಕಾರ ಸ್ಥಾಪನೆಗಾಗಿ ನಡೆದ ಚಳವಳಿಯಲ್ಲೂ ಭಾಗವಹಿಸಿದರು. ಅದು ಸ್ಥಾಪಿತವಾದ ಮೇಲೆ ಸುಮಾರು ಹನ್ನೆರಡು ವರ್ಷಗಳ ಕಾಲ ರಾಜ್ಯದ ವಿಧಾನಪರಿಷತ್ತಿನ ಸದಸ್ಯರಾಗಿದ್ದರು. ಈ ಅವಧಿಯಲ್ಲಿ ಕರ್ನಾಟಕದ ಏಕೀಕರಣಕ್ಕಾಗಿ ಅವರು ದುಡಿದರು.

ಗೊರೂರರು ತಮ್ಮ ಬರಹಗಳಲ್ಲಿ ಈಗ ಕಾಣಸಿಗದ ಅಥವಾ ತ್ವರಿತವಾಗಿ ಮರೆಯಾಗುತ್ತಿರುವ ಹಳ್ಳಿಯ ಬದುಕನ್ನು ಅದರ ಎಲ್ಲ ಮುಖಗಳೊಡನೆ ಚಿತ್ರಿಸುವಲ್ಲಿ ಸಫಲರಾಗಿದ್ದಾರೆ. ಗ್ರಾಮೀಣ ಜೀವನದಲ್ಲಿ ಅವರು ಒಂದಾಗಿ ಬಾಳಿದ್ದರಿಂದ ಇದು ಸಾಧ್ಯವಾಗಿದೆ. ಅವರ ಕೃತಿಗಳಲ್ಲಿ ಕಂಡುಬರುವ ಪಾತ್ರವೈವಿಧ್ಯ ಅಪಾರವಾದುದು; ಅಲ್ಲಿ ಗ್ರಾಮದ ಎಲ್ಲ ವೃತ್ತಿಗಳ, ಎಲ್ಲ ಜಾತಿಗಳ ಜನರೂ ಇದ್ದಾರೆ. ಆದರೆ ಜಾತಿ–ಮತ–ಭೇದಗಳನ್ನು ಮೀರಿ ಎಲ್ಲರನ್ನೂ ಒಗ್ಗೂಡಿಸುವ ಕೆಲವು ಸೂತ್ರಗಳನ್ನು ಗೊರೂರರು ಗುರುತಿಸಿ, ಅವುಗಳಿಗೆ ಒತ್ತುಕೊಡುವುದರ ಮೂಲಕ ಸಾಮರಸ್ಯಯುತವಾದ ಒಂದು ಸಮಷ್ಟಿಯ ಚಿತ್ರವನ್ನು ಮೂಡಿಸುತ್ತಾರೆ.

ಗೊರೂರರ ಕಾದಂಬರಿಗಳು ನಾಲ್ಕು: ಹೇಮಾವತಿ, ಪುನರ್ಜನ್ಮ, ಮೆರವಣಿಗೆ ಮತ್ತು ಊರ್ವಶಿ. ನಾಲ್ಕೂ ಒಳ್ಳೆಯ ಕಾದಂಬರಿಗಳೇ. ಸಂಪ್ರದಾಯಶರಣರಾದ ಗ್ರಾಮೀಣ ಸಮಾಜದಲ್ಲಿ ಸುಧಾರಣೆಯ ಗಾಳಿ ಬೀಸಿದ ಪರಿಯನ್ನು ಚಿತ್ರಿಸುತ್ತದೆ 'ಹೇಮಾವತಿ'. ನೂತನ ವಿಚಾರಗಳಿಗೆ ಮನತೆರೆದ ಯುವಕರು ಹಳ್ಳಿಯಲ್ಲಿ ಹೇಗೆ ಹೊಸ ವಾತಾವರಣವನ್ನು ಸೃಜಿಸಿದರು ಎಂಬುದನ್ನು ಅದು ಹೇಳುತ್ತದೆ.

'ಪುನರ್ಜನ್ಮ' ಸ್ವಾತಂತ್ರ್ಯ ಸಂಗ್ರಾಮ ಕಾಲದ ಒಂದು ಆದರ್ಶಪೂರ್ಣ ಕತೆಯನ್ನು ಬಿತ್ತರಿಸುತ್ತದೆ. ನಮ್ಮ ಸ್ವಾತಂತ್ರ್ಯ ಎಂತಹ ತಪಸ್ಸಿನ ಮತ್ತು ಶ್ರಮದ ಫಲ ಎಂಬುದನ್ನು ಮನಗಾಣಿಸುವ ಕಾದಂಬರಿ. 'ಗರುಡಗಂಬದ ದಾಸಯ್ಯ' ಕೃತಿಯ ಮುನ್ನುಡಿಯಲ್ಲಿ ದ.ರಾ ಬೇಂದ್ರೆ ಹೀಗೆಂದಿದ್ದಾರೆ – "ಒಬ್ಬ ಅರಸುಗಳೆ, ಹಜಾಮರೆ, ಹಾರುವರೆ, ತುರುಕರೆ, ದಾಸಯ್ಯಗಳೆ, ಬಯಲಾಟದವರೆ, ಸುಭೇಧಾರರೆ, ಶಾನುಭೋಗರೆ, ಹೊಲೆಯರೆ ? ಇವರೆಲ್ಲರನ್ನೂ ಒಂದು ಮಾಲೆಯಲ್ಲಿ ಪೋಣಿಸಿದ ವಿಕಟ ಕವಿತ್ವವು ಪ್ರಶಂಸನೀಯವಾದುದೆಂದು ಯಾರು ತಾನೇ ಹೇಳಲಿಕ್ಕಿಲ್ಲ?" ವರಕವಿಗಳ ಈ ಮಾತು ಗೊರೂರರ ಸಾಹಿತ್ಯಕ್ಕೆಲ್ಲಾ ಅನ್ವಯಿಸಬಹುದಾದ ಹೇಳಿಕೆಯಂತಿದೆ.

ಗೊರೂರರು ಸೆಪ್ಟೆಂಬರ್ 28, 1991ರಲ್ಲಿ ನಿಧನರಾದರು. ಅವರು ಚಿತ್ರಿಸಿದಂಥ ಸಮಾಜವೂ ಈಗ ಉಳಿದಿಲ್ಲ. ಆದರೆ ಅವರು ಉಳಿಸಿ ಹೋಗಿರುವ ಅನುಭವ ಶ್ರೇಷ್ಠತೆ ನಮಗೆ ಆಸ್ತಿಯಾಗಿ ಉಳಿದಿದೆ.


## ಜನಸಂಖ್ಯಾ ನಿಯಂತ್ರಣ ಯೋಜನೆಯನ್ನು ಪ್ರಕಟಿಸಿದ ಸಿಎಂ ಯೋಗಿ ಆದಿತ್ಯನಾಥ್ ಸರ್ಕಾರ



ಉತ್ತರ ಪ್ರದೇಶದ ಸಿಎಂ ಯೋಗಿ ಆದಿತ್ಯನಾಥ್ ಅವರು ಜನಸಂಖ್ಯಾ ನಿಯಂತ್ರಣ ಯೋಜನೆಯನ್ನು ಪ್ರಕಟಿಸಿದ್ದಾರೆ. ಉತ್ತರ ಪ್ರದೇಶದ ಜನಸಂಖ್ಯೆಯನ್ನು ಸ್ಥಿರಗೊಳಿಸುವ, ತಾಯಿ ಹಾಗೂ ಶಿಶುಮರಣವನ್ನು ತಡೆಯುವ ಉದ್ದೇಶದಿಂದ ಈ ನೀತಿಯನ್ನು ಅನಾವರಣ ಮಾಡಿದ್ದಾರೆ. ಇದಕ್ಕೆ ಕಾಲಮಿತಿ ನಿಗದಿ ಮಾಡಿದ್ದು, 2021– 2030 ರ ವರೆಗಿನ ಅವಧಿಗೆ ಪೂರಕವಾಗಿ ಈ ಯೋಜನೆ ಅಳವಡಿಸಲಾಗಿದ್ದು, 2026 ರೊಳಗೆ ಜನನ ಪ್ರಮಾಣವನ್ನು 2.1ಕ್ಕೆ ಮತ್ತು 2030ರ ವೇಳೆಗೆ 1.9ಕ್ಕೆ ಇಳಿಕೆ ಮಾಡುವ ಗುರಿಯನ್ನು ಈ ನೀತಿ ಒಳಗೊಂಡಿದೆ.

ಜನಸಂಖ್ಯೆ ನಿಯಂತ್ರಣ ಕರಡು ಮಸೂದೆಯನ್ನು ವೆಬ್ಸೈಟ್‌ನಲ್ಲಿ ಪ್ರಕಟಿಸಿದ್ದ ಉತ್ತರ ಪ್ರದೇಶದ ಕಾನೂನು ಆಯೋಗ ಜುಲೈ 19 ರೊಳಗೆ ಇದಕ್ಕೆ ಸಾರ್ವಜನಿಕ ವಲಯದಿಂದ ಸಲಹೆಗಳನ್ನು ಆಹ್ವಾನಿಸಿತ್ತು. ಈ ಮಸೂದೆಯಂತೆ ರಾಜ್ಯದಲ್ಲಿ ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವವರು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸ್ಪರ್ಧಿಸುವುದು, ಸರ್ಕಾರಿ ಉದ್ಯೋಗ, ಸಬ್ಸಿಡಿ ಪಡೆಯುವುದಕ್ಕೂ ಅರ್ಹರಲ್ಲ ಎಂದು ಸರ್ಕಾರ ತಿಳಿಸಿತ್ತು. ಜೊತೆಗೆ ಎರಡು ಮಕ್ಕಳನ್ನು ಹೊಂದುವ ದಂಪತಿಗೆ ಪ್ರೋತ್ಸಾಹ ಧನ ನೀಡಲಾಗುತ್ತದೆ ಎಂದು ಸರ್ಕಾರ ಈ ಮಸೂದೆಯಲ್ಲಿ ಹೇಳಿತ್ತು.

## ಪುಸ್ತಕ ಪರಿಚಯ




ಪುಸ್ತಕದ ಹೆಸರು: ಗಾಂಧೀಯ ಅರ್ಥಶಾಸ್ತ್ರ
ಲೇಖಕರು: ಪ್ರೊ. ಎಂ ಎಂ ಗುಪ್ತ
ಪ್ರಕಾಶಕರು: ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು
ಬೆಲೆ: ರೂ. 360
ಪುಟಗಳು: 422
ಪುಸ್ತಕ ಖರೀದಿಸಲು ವೆಬ್ ಸೈಟ್: sahityabooks.com

ಮಹಾತ್ಮಾ ಗಾಂಧಿಯವರು ಕೇವಲ ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದ್ದಷ್ಟೇ ಅಲ್ಲ, ಆರ್ಥಿಕತೆಯ ಬಗ್ಗೆಯೂ ತಮ್ಮ ಚಿಂತನೆಗಳನ್ನು ದಾಖಲಿಸಿದ್ದಾರೆ. ಅವರು ನಡೆಸುತ್ತಿದ್ದ ಯಂಗ್ ಇಂಡಿಯಾ, ಹರಿಜನ್ ಮೊದಲಾದ ಪತ್ರಿಕೆಗಳಲ್ಲಿ ಹಾಗೂ ಅನೇಕ ಭಾಷಣಗಳಲ್ಲಿ, ಭಾರತದಂತಹ ದೇಶಕ್ಕೆ ಎಂತಹ ಆರ್ಥಿಕತೆ ಬೇಕು ಎಂಬ ಬಗ್ಗೆ ಗಹನವಾದ ವಿಚಾರಗಳನ್ನು ಅವರು ಪ್ರಸ್ತಾಪಿಸಿದ್ದಾರೆ. ಅವರ ಸ್ವದೇಶಿ ಕಲ್ಪನೆ, ಗ್ರಾಮಾಧಾರಿತ ಅರ್ಥವ್ಯವಸ್ಥೆ, ಕೈಗಾರಿಕೆಗಳ ಬಗ್ಗೆ ನಮಗೆ ಇರಬೇಕಾದ ಎಚ್ಚರಿಕೆ ಮೊದಲಾದ ಅನೇಕ ವಿಷಯಗಳು ಇಂದಿಗೂ ಪ್ರಸ್ತುತವೇ. ಅಧಿಕಾರ ಹಾಗು ಆರ್ಥಿಕ ವ್ಯವಸ್ಥೆಯ ವಿಕೇಂದ್ರೀಕರಣದ ಬಗ್ಗೆ ಅವರು ಮಾತನಾಡಿದ ವಿಚಾರಗಳು ಜಾರಿಗೆ ಬರದೇ ಇದ್ದುದರ ದುಷ್ಪರಿಣಾಮಗಳು ಇಂದು ನಮಗೆ ಕಾಣಿಸುತ್ತಿವೆ. ಸಮಾಜಿಕ ಜೀವನದಲ್ಲಿ ಧರ್ಮದ ಮಹತ್ತ್ವದ ಬಗ್ಗೆ ಅವರು ಒತ್ತಿ ಹೇಳಿದ್ದಾರೆ. ಅದು ಇಲ್ಲದಿರುವುದರ ಪರಿಣಾಮವೂ ಇಂದು ನಮಗೆ ಗೋಚರಿಸುತ್ತಿದೆ.

ಗಾಂಧಿಯವರನ್ನು ಒಬ್ಬ ಆರ್ಥಿಕತಜ್ಞರಾಗಿ ನೋಡಲು ಅನುಕೂಲವಾಗುವಂತೆ ಬೇರೆ ಬೇರೆ ಗ್ರಂಥಗಳಲ್ಲಿ, ಲೇಖನಗಳಲ್ಲಿ ಇದ್ದ ಅವರ ಆರ್ಥಿಕ ವಿಚಾರಗಳನ್ನು ಒಟ್ಟಿಗೆ ಕಲೆಹಾಕಿ ಕೊಡುತ್ತದೆ ಈ ಪುಸ್ತಕ. ಅರ್ಥಶಾಸ್ತ್ರದ ಪ್ರಾಧ್ಯಾಪಕರೂ ಆದ ಲೇಖಕ ಎಂ ಎಂ ಗುಪ್ತ ಅವರು ಪುಸ್ತಕದ ಕೊನೆಯಲ್ಲಿ ಸರ್ವೋದಯ ಮಾದರಿಯನ್ನು ಇತರ ಆರ್ಥಿಕ ಮಾದರಿಗಳ ಜೊತೆಗೆ ತುಲನೆ ಮಾಡಿ ವಿಶ್ಲೇಷಣೆಯನ್ನು ಮಾಡಿದ್ದಾರೆ.

ಒಟ್ಟಿನಲ್ಲಿ, ವಿಫಲವಾಗುತ್ತಿರುವ ಆರ್ಥಿಕ ಮಾದರಿಗಳ ನಡುವೆ, ನಮ್ಮ ದೇಶಕ್ಕೆ ಹೊಂದಿಕೆಯಾಗುವ ಆರ್ಥಿಕ ವಿಚಾರಗಳ ಹುಡುಕಾಟದಲ್ಲಿರುವವರಿಗೆ ಇದೊಂದು ಒಳ್ಳೆಯ ಆಕಾರ ಗ್ರಂಥವೆನ್ನುವುದರಲ್ಲಿ ಸಂಶಯವಿಲ್ಲ. ವಿದ್ಯಾರ್ಥಿಗಳೂ, ಆರ್ಥಿಕ ತಜ್ಞರೂ ಓದಲೇಬೇಕಾದ ಪುಸ್ತಕ ಇದು.

## ಎಲ್ಲೋ ಕೇಳಿದ ಕಥೆ

ಒಬ್ಬ ವ್ಯಕ್ತಿ ಜೀವನದಲ್ಲಿ ತುಂಬಾ ಜಿಗುಪ್ಸೆ ಹೊಂದಿದ್ದ. ಅವನಿಗೆ ತನ್ನ ಸ್ಥಿತಿಯ ಬಗ್ಗೆ ನೆನೆದರೆ ಕೋಪ. ನನಗೆ ಮಾತ್ರ ಏಕೆ ಹೀಗಾಗುತ್ತಿದೆ ಎಂದು ಯೋಚಿಸಿ ತಲೆ ಕೆಡಿಸಿಕೊಂಡಿದ್ದ. ನನ್ನ ಸಮಸ್ಯೆಗೆ ಝೆನ್ ಗುರುಗಳನ್ನು ಕಂಡರೆ ಪರಿಹಾರ ಸಿಗಬಹುದೆಂದು ತೀರ್ಮಾನಿಸಿ ಝೆನ್ ಗುರುಗಳನ್ನು ಭೇಟಿಯಾದ.

ಝೆನ್ ಗುರುಗಳಿಗೆ ಅವನ ಮುಖ ನೋಡಿದಾಗಲೇ ತುಂಬಾ ಸಮಸ್ಯೆ ಇರುವಂತೆ ತೋರಿತ್ತು. ಅವನು ಗುರುಗಳ ಹತ್ತಿರ "ಗುರುಗಳೇ ನನಗೆ ಜೀವನ ಸಾಕಾಗಿದೆ. ನನಗೆ ಏನಾಗಿದೆ, ನಾನು ಯಾರು?" ಎಂದು ಬಡಬಡಿಸುತ್ತಿದ್ದ. ಗುರುಗಳು ಏನೂ ಮಾತನಾಡಲಿಲ್ಲ. ಆ ವ್ಯಕ್ತಿಯು ಗುರುಗಳ ಹತ್ತಿರ "ನನ್ನ ಸಮಸ್ಯೆಗೆ ಪರಿಹಾರ ನೀಡಿ" ಎಂದು ಬಗೆಬಗೆಯಾಗಿ ಬೇಡಿಕೊಂಡನು. ಆದರೂ ಗುರುಗಳು ತುಟಿಪಿಟಕ್ ಎನ್ನಲಿಲ್ಲ.

ಆ ವ್ಯಕ್ತಿಗೆ ತುಂಬಾ ಕೋಪ ಬಂತು. ಗುರುಗಳ ಹತ್ತಿರ ಪರಿಹಾರ ದೊರಕುವುದಿಲ್ಲ ಎಂದು ಭಾಸವಾಯಿತು. ನನ್ನ ಸಮಸ್ಯೆಯನ್ನು ನಾನೇ ಎದುರಿಸುತ್ತೇನೆ, ಇವರ ಸಹಾಯ ಬೇಕಾಗಿಲ್ಲ ಎಂಬ ಛಲದಿಂದ ಎದ್ದು ಹೊರನಡೆದನು. ಆಗ ಗುರುಗಳು ಅವನನ್ನು ಕರೆದು ಅವನ ಮುಖವನ್ನು ದಿಟ್ಟಿಸಿ ನೋಡುತ್ತಾ "ಈಗ ನಿನಗೆ ಎಲ್ಲವನ್ನು ಎದುರಿಸುತ್ತೇನೆ ಎಂಬ ಛಲ ಬಂತು ಅಲ್ಲವೇ? ನಿನಗೆ, ನೀನು ಯಾರು, ನಿನ್ನ ಶಕ್ತಿ ಏನು ಎಂದು ತಿಳಿಯಿತು, ಆದ್ದರಿಂದ ಇನ್ನು ನಿನ್ನ ಸಮಸ್ಯೆ ಪರಿಹಾರವಾಗುವುದು" ಎಂದರು.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಸುನೀಲ್ ಕುಲಕರ್ಣಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ

ಸೆಪ್ಟೆಂಬರ್ ತಿಂಗಳಿನಿಂದ ಪುಣೆಯ ಸೆರಂ ಇನ್ಸ್ಟಿಟ್ಯೂಟ್ ರಷ್ಯಾದ ಸ್ಪುಟ್ನಿಕ್–ವಿ ಲಸಿಕೆಯನ್ನು ಉತ್ಪಾದನೆ ಮಾಡಲಿದೆ. ಈ ಸಂಬಂಧ ರಷ್ಯಾದ ಆರ್‌ಡಿಐಎಫ್ ಮಾಹಿತಿ ನೀಡಿದ್ದು, ಭಾರತದಲ್ಲಿ ಪ್ರತಿ




ವರ್ಷ 300 ಮಿಲಿಯನ್ ಲಸಿಕೆ ಉತ್ಪಾದನೆ ಮಾಡುವ ಗುರಿ ಇರುವುದಾಗಿ ತಿಳಿಸಿದೆ. ಈ ಸಂಬಂಧ ಸೆರಂ ಸಂಸ್ಥೆಗೆ ತಂತ್ರಜ್ಞಾನ ರವಾನೆ ಪ್ರಕ್ರಿಯೆ ಸಹ ಈಗಾಗಲೇ ಆರಂಭವಾಗಿದೆ ಎಂದು ಅದು ತಿಳಿಸಿದೆ. ಈ ಲಸಿಕೆ ವಿಶ್ವದಾದ್ಯಂತ ಪ್ರಸಿದ್ಧಿ ಪಡೆದಿದ್ದು, ಆಗಸ್ಟ್ ತಿಂಗಳಲ್ಲಿ 18 ಕೋಟಿ ಲಸಿಕೆಗಳನ್ನು ಉತ್ಪಾದನೆ ಮಾಡಲಾಗುತ್ತದೆ ಎಂದು ರಷ್ಯಾ ತಿಳಿಸಿದೆ.

ಅಲ್ ಖೈದಾ ಸಂಘಟನೆಗೆ ಸೇರಿದ ಮೂರು ಶಂಕಿತ ಉಗ್ರರನ್ನು ಲಕ್ನೋದಲ್ಲಿ ಬಂಧಿಸಲಾಗಿದ್ದು, ಈ ಸಂಬಂಧ ಉತ್ತರ ಪ್ರದೇಶದಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ. ಇವರು ಅಲ್ ಖೈದಾ ಬೆಂಬಲ ಪಡೆಯುತ್ತಿರುವ ಅನ್ಸರ್ ಗಝ್ವಾತುಲ್ ಹಿಂದ್ ಸಂಘಟನೆಗೆ



ಸೇರಿದವರಾಗಿದ್ದಾರೆ ಎಂದು ಮೂಲಗಳು ಹೇಳಿವೆ. ಘಟನೆಯ ಬಳಿಕ ಹರ್ದೋಯ್, ಸೀತಾಪುರ್, ಬರಾಬಂಕಿ, ರಾಯ್ ಬರೇಲಿ ಸೇರಿದಂತೆ ಇನ್ನಿತರ ಕಡೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ರಾಜ್ಯದ ಭಯೋತ್ಪಾದನಾ ನಿಗ್ರಹ ದಳ ಲಕ್ನೋದ ಎರಡು ಮನೆಗಳ ಮೇಲೆ ದಾಳಿ ನಡೆಸಿ ಸ್ಥಳದಲ್ಲಿದ್ದ ಏಳು ಮಂದಿ ಉಗ್ರರ ಪೈಕಿ ಮೂವರನ್ನು ಬಂಧಿಸಿದ್ದು, ಉಳಿದ ಐದು ಮಂದಿ ತಪ್ಪಿಸಿಕೊಂಡಿದ್ದು ಅಧಿಕಾರಿಗಳು ಮತ್ತಷ್ಟು ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಅಸ್ಸಾಮಿನ ಸಿಲ್ಚಾರ್‌ನಿಂದ ಮಣಿಪುರದ ವೈಂಗೈಚುನ್ಪಾವ್‌ಗೆ ಇದೇ ಮೊದಲ ಬಾರಿಗೆ ಎಂಬಂತೆ ಕಳೆದ ಶುಕ್ರವಾರ ಪ್ರಾಯೋಗಿಕ ರೈಲು ಸಂಚಾರ ನಡೆಸಿದೆ. ಮಣಿಪುರ ಗುಡ್ಡಗಾಡು ಪ್ರದೇಶವಾಗಿದ್ದು, ಇಲ್ಲಿಗೆ ಈವರೆಗೆ ರೈಲು ಸೇವೆ ಇರಲಿಲ್ಲ. ಇದೀಗ ಅಲ್ಲಿನ ಜನರ ಬಹುಕಾಲದ ಕನಸು ನನಸಾಗುವ ಕಾಲ ಸನ್ನಿಹಿತವಾಗಿದೆ. ಮಣಿಪುರದಲ್ಲಿ ಸುಮಾರು 11 ಕಿಮೀ ಉದ್ದದ ರೈಲ್ವೆ ಮಾರ್ಗವನ್ನು ನಿರ್ಮಿಸಲಾಗಿದ್ದು, ಈ ಮಾರ್ಗದಲ್ಲಿ ರೈಲು ತನ್ನ ಪ್ರಾಯೋಗಿಕ ಸಂಚಾರವನ್ನು ಯಶಸ್ವಿಯಾಗಿ ನಡೆಸಿದೆ.

ವೇದಾಧ್ಯಯನಕ್ಕೆ ಪೂರಕವಾಗುವಂತೆ ಎರಡು ಸ್ಕೂಲ್ ಬೋರ್ಡ್‌ಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಿಳಿಸಿದ್ದಾರೆ. ಉಜ್ಜಯಿನಿಯ ಮಹರ್ಷಿ ಸಾಂದೀಪನಿ ರಾಷ್ಟ್ರೀಯ ವೇದ ವಿದ್ಯಾ ಪ್ರತಿಷ್ಠಾನ (ಎಂಎಸ್‌ಆರ್‌ವಿವಿಪಿ) ಹಾಗೂ ಒಂದು ಖಾಸಗಿ ಮಂಡಳಿಗೂ ಅನುಮತಿ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ. ಈ ಮಂಡಳಿಗಳು ಸಿಬಿಎಸ್‌ಇ ಮತ್ತು ಎನ್‌ಐಒಎಸ್‌ಗಳಡಿಯಲ್ಲಿ ಕಾರ್ಯ ನಿರ್ವಹಿಸಲಿರುವುದಾಗಿ ಅವರು ತಿಳಿಸಿದ್ದಾರೆ.



ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮ ಘಟ್ಟ ವನ್ಯಪ್ರದೇಶದಲ್ಲಿ ಅಪರೂಪ ಮತ್ತು ಅವನತಿಯ ಅಂಚಿನಲ್ಲಿರುವ ವಿಶೇಷ ಮರಗಳು ಹಾಗೂ ವನ್ಯ ಸಂಪತ್ತನ್ನು ಸಂರಕ್ಷಿಸಿದ ಕಾರಣಕ್ಕಾಗಿ ವಿಶ್ವಸಂಸ್ಥೆಯು ಸಿದ್ದಾಪುರ ತಾಲೂಕಿನ ರಾಂಪತ್ರೆ ಜಡ್ಡಿ ಪ್ರದೇಶಕ್ಕೆ 2021ನೇ ಸಾಲಿನ ಈಕ್ವೇಟರ್ ಪ್ರಶಸ್ತಿ ಘೋಷಿಸಿದೆ. ಸುಮಾರು 10 ಸಾವಿರ ಅಮೆರಿಕನ್ ಡಾಲರ್ ಮೊತ್ತದ ಈ ಪ್ರಶಸ್ತಿ ಭಾರತೀಯ ರೂಪಾಯಿ ಮೌಲ್ಯದಲ್ಲಿ ಏಳೂವರೆ ಲಕ್ಷ ರೂಪಾಯಿಗಳಾಗಿವೆ. ರಾಂಪತ್ರೆ ಜಡ್ಡಿ ಪ್ರದೇಶದಲ್ಲಿರುವ ಒಂದಂಕಿ, ರಾಂಪತ್ರೆ, ರಾಮಡಿಕೆ ಮರಗಳು ಅತ್ಯಂತ ಪುರಾತನ ಮತ್ತು ಅರಣ್ಯದ ಮಾಣಿಕ್ಯ ಎಂಬ ಕೀರ್ತಿಗೆ ಪಾತ್ರವಾಗಿವೆ. ಅವುಗಳನ್ನು ರಕ್ಷಿಸಲು ಸ್ನೇಹಕುಂಜ ಸಂಸ್ಥೆ ನಿರಂತರವಾಗಿ ಕೆಲಸ ಮಾಡುತ್ತಾ ಬಂದಿದೆ.

## ಸಾಲುದ್ದದ ಸುದ್ದಿಗಳು

ಕೇಂದ್ರ ಸರ್ಕಾರದ 'ಸ್ಟಡಿ ಇನ್ ಇಂಡಿಯಾ' ಕಾರ್ಯಕ್ರಮದಡಿ, ವಿದೇಶದಿಂದ ಭಾರತಕ್ಕೆ ಆಗಮಿಸಿ ಯೋಗಾಭ್ಯಾಸ ಕಲಿಯುವವರಿಗಾಗಿ, ಯೋಗ ತರಬೇತಿಯನ್ನು ಸೇರ್ಪಡೆ ಮಾಡಲಾಗುತ್ತದೆ ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ. ಸ್ಟಡಿ ಇನ್ ಇಂಡಿಯಾ ಯೋಜನೆಯು ಭಾರತ



ಸರ್ಕಾರದ ಪ್ರಮುಖ ಯೋಜನೆಯಾಗಿದೆ. ಇದನ್ನು ಶಿಕ್ಷಣ ಸಚಿವಾಲಯ, ವಿದೇಶಾಂಗ ಸಚಿವಾಲಯ, ಗೃಹ ವ್ಯವಹಾರಗಳ ಸಚಿವಾಲಯ ಮತ್ತು ಭಾರತೀಯ ವೈದ್ಯಕೀಯ ಮಂಡಳಿ ಸಹಯೋಗದೊಂದಿಗೆ 2018 ರ ಎಪ್ರಿಲ್ ತಿಂಗಳಲ್ಲಿ ಆರಂಭ ಮಾಡಲಾಗಿದೆ. ಹಾಗೆಯೇ, ಯುಜಿಸಿಯು ಬೆಂಗಳೂರಿನಲ್ಲಿ ಅಂತರ ವಿದ್ಯಾಲಯ ಯೋಗ ವಿಜ್ಞಾನ ಕೇಂದ್ರ ಸ್ಥಾಪನೆಗೆ ಅನುಮತಿ ನೀಡಿದೆ. 2017 ರ ಜನವರಿಯಿಂದ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲೂ ಯೋಗ ಒಂದು ವಿಷಯವಾಗಿ ಸೇರ್ಪಡೆಯಾಗಿದೆ. 9 ಕೇಂದ್ರೀಯ ವಿವಿಗಳಲ್ಲಿ ಯೋಗ ವಿಭಾಗಗಳನ್ನು ಆರಂಭಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಜುಲೈ 21 ರ ಬಕ್ರೀದ್ ಸಂದರ್ಭದಲ್ಲಿ ಕಣಿವೆ ರಾಜ್ಯ ಜಮ್ಮು ಕಾಶ್ಮೀರದಾದ್ಯಂತ ಹಸು, ಕರು, ಒಂಟೆಗಳ ಹತ್ಯೆ ನಿಷೇಧಿಸಿ ಅಲ್ಲಿನ ಆಡಳಿತ ಆದೇಶ ಹೊರಡಿಸಿದೆ. ಬಕ್ರೀದ್ ಆಚರಣೆಯ ಸಂದರ್ಭದಲ್ಲಿ ರಾಜ್ಯಾದ್ಯಂತ ಹೆಚ್ಚಿನ ಪ್ರಮಾಣದಲ್ಲಿ ಪ್ರಾಣಿಗಳ ಹತ್ಯೆ ನಡೆಯುವ ಸಂಭವವಿರುವುದರಿಂದ ಈ ಪ್ರಾಣಿ ಕಲ್ಯಾಣ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದಕ್ಕೆ ಅಗತ್ಯ ಮುನ್ನೆಚ್ಚರಿಕೆಗಳನ್ನು ಜಾರಿಗೊಳಿಸುವಂತೆ ಸೂಚಿಸಲಾಗಿದೆ.

ಜಮ್ಮು ಕಾಶ್ಮೀರದ ಪುಲ್ವಾಮಾದ ತ್ರಾಲ್ ಪ್ರದೇಶದಲ್ಲಿ ಮಾರ್ಟರ್ ಬಾಂಬ್, ಮದ್ದು ಗುಂಡುಗಳು ಸೇರಿದಂತೆ ಅಪಾರ ಪ್ರಮಾಣದಲ್ಲಿ ಸ್ಫೋಟಕಗಳನ್ನು ಇತ್ತೀಚೆಗೆ ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಜಮ್ಮು ಕಾಶ್ಮೀರದ ಪೊಲೀಸ್ ಇಲಾಖೆ ತಿಳಿಸಿದೆ. ಆವಂತಿಪೋರಾ ಪ್ರದೇಶದಲ್ಲಿ ಭಯೋತ್ಪಾದಕರಿರುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆಯನ್ನು ನಡೆಸಲಾಗಿದ್ದು, ಉಗ್ರಗಾಮಿಗಳು ಮಣ್ಣಿನೊಳಗಡೆ ಅಡಗಿಸಿಟ್ಟಿದ್ದ ಸ್ಫೋಟಕಗಳು ದೊರೆತಿವೆ ಎಂದು



ಪೊಲೀಸ್ ಮೂಲಗಳು ತಿಳಿಸಿವೆ. ಜಮ್ಮು ಕಾಶ್ಮೀರದಲ್ಲಿ 370 ನೇ ವಿಧಿ ರದ್ದಾದ ಬಳಿಕ ಕೇಂದ್ರ ಸರ್ಕಾರ ಬಿಗಿ ಕ್ರಮಗಳನ್ನು ಕೈಗೊಂಡಿದ್ದರ ಪರಿಣಾಮ ಭಯೋತ್ಪಾದಕ ಚಟುವಟಿಕೆಗಳು ಅಲ್ಲಿ ಕನಿಷ್ಠ ಪ್ರಮಾಣಕ್ಕೆ ಇಳಿದಿವೆ. ಹಾಗೂ, ಜನಸಾಮಾನ್ಯರು ಪ್ರತ್ಯೇಕತಾವಾದಿಗಳಿಗೆ ಹಾಗು ಉಗ್ರಗಾಮಿಗಳಿಗೆ ಬೆಂಬಲ ನೀಡುವುದು ಸಂಪೂರ್ಣ ನಿಂತಿದೆ. ಇದರಿಂದ ಚಿಂತೆಗೀಡಾಗಿರುವ ಉಗ್ರ ಸಂಘಟನೆಗಳು ಹೇಗಾದರೂ ಮಾಡಿ ಅಲ್ಲಿನ ಶಾಂತಿ ಕದಡುವ ಪ್ರಯತ್ನ ನಡೆಸುತ್ತಿದ್ದರೂ ಕೂಡ ಭದ್ರತಾ ಪಡೆಗಳು ಅವೆಲ್ಲವನ್ನು ವಿಫಲಗೊಳಿಸುತ್ತಿವೆ.

## ಸಗಣಿಯಿಂದ ಪೈಂಟ್: ರಾಜಸ್ಥಾನದಲ್ಲಿ ಮೊದಲ ಕಾರ್ಖಾನೆ ಆರಂಭ

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ತಮ್ಮನ್ನು ಖಾದಿ ಪ್ರಾಕೃತಿಕ್ ಪೇಂಟ್‌ನ ಪ್ರಚಾರ ರಾಯಭಾರಿಯಾಗಿ ಘೋಷಿಸಿಕೊಂಡಿದ್ದಾರೆ. ಸಗಣಿಯಿಂದ ತಯಾರಿಸುವ ಬಣ್ಣಗಳ ಉತ್ಪಾದನೆಗೆ ಯುವ ಉದ್ಯಮಿಗಳನ್ನು ಉತ್ತೇಜಿಸಲು ದೇಶಾದ್ಯಂತ ಪ್ರಚಾರ ಕೈಗೊಳ್ಳುವುದಾಗಿ ಹೇಳಿದರು. ಜೈಪುರದಲ್ಲಿ ಭಾರತದ ಮೊದಲ ಮತ್ತು ಏಕೈಕ ಸಗಣಿಯಿಂದ ತಯಾರಿಸಿದ ಖಾದಿ ಪ್ರಾಕೃತಿಕ್ ಪೇಂಟ್‌ನ ಹೊಸ ಸ್ವಯಂಚಾಲಿತ ಉತ್ಪಾದನಾ ಘಟಕವನ್ನು ಆನ್ಲೈನ್ ಕಾರ್ಯಕ್ರಮದ ಮೂಲಕ ಅವರು ಉದ್ಘಾಟಿಸಿದರು




ರೈತರ ಆದಾಯವನ್ನು ಹೆಚ್ಚಿಸುವುದು ಮತ್ತು ದೇಶಾದ್ಯಂತ ಸ್ವಯಂ ಉದ್ಯೋಗವನ್ನು ಸೃಷ್ಟಿಸುವ ಅವಳಿ ಉದ್ದೇಶಗಳೊಂದಿಗೆ ಈ ಪೇಂಟ್ ಅನ್ನು ಪರಿಚಯಿಸಲಾಗಿದೆ. ಈ ಆವಿಷ್ಕಾರದಿಂದ ಗರಿಷ್ಠ ಜನರು ಪ್ರಯೋಜನ ಪಡೆಯಲು, ಕೆವಿಐಸಿಯು ಈ ಯೋಜನೆಯನ್ನು ಉದ್ಯೋಗಸೃಷ್ಟಿಗಾಗಿ ಕೇಂದ್ರ ಸರಕಾರದ ಪ್ರಮುಖ ಯೋಜನೆಯಾದ ಪ್ರಧಾನ ಮಂತ್ರಿ ಉದ್ಯೋಗಸೃಷ್ಟಿ ಕಾರ್ಯಕ್ರಮದ (ಪಿಎಂಇಜಿಪಿ) ಅಡಿಯಲ್ಲಿ ಸೇರಿಸಿದೆ. ಡಿಸ್ಟೆಂಪರ್ ಮತ್ತು ಎಮಲ್ಷನ್ ಎಂಬ ಎರಡು ವಿಧಗಳಲ್ಲಿ ಈ ಖಾದಿ ಪ್ರಾಕೃತಿಕ್ ಪೇಂಟ್ "ಅಷ್ಟಾಲಾಭ್" ಲಭ್ಯವಾಗುತ್ತದೆ. ಇದು ಬ್ಯಾಕ್ಟೀರಿಯಾ ಪ್ರತಿರೋಧಕ, ಶಿಲೀಂಧ್ರ ಪ್ರತಿರೋಧಕ ಮತ್ತು ನೈಸರ್ಗಿಕ ಉಷ್ಣ ನಿರೋಧಕ ಗುಣಲಕ್ಷಣಗಳಂತಹ ಎಂಟು ಪ್ರಯೋಜನಗಳನ್ನು ಒಳಗೊಂಡಿದೆ. ಈ ಪೇಂಟ್ ಅಗ್ಗದ ದರದ, ಪರಿಸರಸ್ನೇಹಿ, ವಿಷಕಾರಿಯಲ್ಲದ ಹಾಗು ವಾಸನಾರಹಿತವಾದುದಾಗಿದೆ.

ದೇಶದ ಎಂಟು ರಾಜ್ಯಗಳಲ್ಲಿರುವ 14 ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಪ್ರಾದೇಶಿಕ ಭಾಷೆಗಳಲ್ಲಿ ಕೋರ್ಸ್‌ಗಳನ್ನು ಆಯ್ಕೆ ಮಾಡುವ ಅವಕಾಶ ನೀಡಲಾಗಿದ್ದು, ಅಖಿಲ ಭಾರತ ತಾಂತ್ರಿಕ ಮಂಡಳಿ ಈ ನಿರ್ಧಾರಕ್ಕೆ ಎಲ್ಲೆಡೆ ಸ್ವಾಗತ ದೊರೆತಿದೆ. ರಾಷ್ಟೀಯ ಶಿಕ್ಷಣ ನೀತಿಗೆ ಅನುಗುಣವಾಗಿ ಬಿ.ಟೆಕ್ ಪದವಿಯಲ್ಲಿ ಹಿಂದಿ, ಮರಾಠಿ, ತಮಿಳು, ತೆಲುಗು, ಕನ್ನಡ, ಗುಜರಾತಿ, ಮಲಯಾಳಂ, ಬಂಗಾಳಿ, ಅಸ್ಸಾಮಿ, ಪಂಜಾಬಿ, ಒಡಿಯಾ ಭಾಷೆಗಳಲ್ಲಿ ಕೋರ್ಸ್‌ಗಳ ಆಯ್ಕೆಗೆ ಮಂಡಳಿ ಅನುಮತಿ ನೀಡಿದೆ.

## ತಮಿಳುನಾಡಿನ ಬಿಜೆಪಿ ಅಧ್ಯಕ್ಷರಾಗಿ ಕೆ. ಅಣ್ಣಾಮಲೈ ನೇಮಕ



ತಮಿಳುನಾಡಿನ ಬಿಜೆಪಿ ಅಧ್ಯಕ್ಷರನ್ನಾಗಿ ಮಾಜಿ ಐಪಿಎಸ್ ಅಧಿಕಾರಿ ಕೆ. ಅಣ್ಣಾಮಲೈ ಅವರನ್ನು ನೇಮಕ ಮಾಡಿ ಪಕ್ಷದ ಹೈಕಮಾಂಡ್ ಆದೇಶ ಹೊರಡಿಸಿದೆ. ಅಣ್ಣಾಮಲೈ ಅವರು ಕರ್ನಾಟಕದ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿ, ಬಳಿಕ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು. ಆ ಬಳಿಕ ತಮಿಳುನಾಡಿನಲ್ಲಿ ಬಿಜೆಪಿಗೆ ಸೇರ್ಪಡೆಯಾಗಿದ್ದರು. ಇದೀಗ 'ಕರ್ನಾಟಕದ ಸಿಂಗಂ' ಎಂದೇ ಖ್ಯಾತಿ ಪಡೆದಿದ್ದ ಅಣ್ಣಾಮಲೈ ಅವರು ಅಧ್ಯಕ್ಷರಾಗಿರುವುದರಿಂದ ಪಕ್ಷಕ್ಕೆ ಹೆಚ್ಚು ಬಲ ಬರಲಿದೆ ಎಂದು ಎಲ್ಲೆಡೆ ಅಭಿಪ್ರಾಯ ವ್ಯಕ್ತವಾಗಿದೆ.

Date of Publication 25 JULY 2021

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-08-2021

पुंगव PUNGAVA

# 74, Ranga Rao Road, Shankarapuram, Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00



## ಮಗ ಕೇಂದ್ರ ಸಚಿವನಾದರೂ ಹೊಲದಲ್ಲಿ ದುಡಿಯುವ ಅಪ್ಪ ಅಮ್ಮ

ಮಗ ಮೋದಿ ಸರ್ಕಾರದಲ್ಲಿ ಮಹತ್ವದ ಖಾತೆ ವಹಿಸಿಕೊಂಡ ಕೇಂದ್ರ ಸಚಿವ. ಅವರ ಹೆತ್ತವರು ಮಾತ್ರ ಮಗ ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ 'ಕಾಯಕವೇ ಕೈಲಾಸ' ಎಂಬಂತೆ ಸ್ವಾಭಿಮಾನದಿಂದ ದುಡಿದು ಬದುಕುತ್ತಿದ್ದಾರೆ.



ಹೌದು, ಈ ಹಿಂದೆ ತಮಿಳುನಾಡಿನ ಬಿಜೆಪಿ ಅಧ್ಯಕ್ಷರಾಗಿದ್ದ, ಇತ್ತೀಚೆಗೆ ಮೋದಿ ಸಂಪುಟದಲ್ಲಿ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆಯ ಸಹಾಯಕ ಸಚಿವರಾಗಿ ಜವಾಬ್ದಾರಿ ವಹಿಸಿಕೊಂಡ ಎಲ್. ಮುರುಗನ್ ಅವರ ಹೆತ್ತವರು, ಮಗ ದೇಶದ ಜವಾಬ್ದಾರಿಯುತ, ಉನ್ನತ ಹುದ್ದೆಯಲ್ಲಿದ್ದರೂ, ತಾವು ದುಡಿದು ತಿನ್ನಬೇಕು ಎಂಬ ಸ್ವಾಭಿಮಾನದಿಂದ ಕೆಲಸ ಮಾಡಿ ಜೀವನ ನಡೆಸುತ್ತಿದ್ದಾರೆ. ಮುರುಗನ್ ಅವರ ತಂದೆ ಲೋಕನಾಥನ್ (68), ತಾಯಿ ಎಲ್. ವರದಮ್ಮಾಳ್ (59) ದಂಪತಿಯೇ ತಮ್ಮ ಸ್ವಾಭಿಮಾನಿ ಜೀವನದ ಮೂಲಕ ಸುದ್ದಿಯಾಗಿರುವುದು. ತಮಿಳುನಾಡಿನ ನಾಮಕ್ಕಲ್ ಜಿಲ್ಲೆಯ ನಿವಾಸಿಗಳಾಗಿರುವ ಇವರು ಈಗಲೂ ಹೊಲದಲ್ಲಿ ದುಡಿದು, ಜೀವನ ನಿರ್ವಹಿಸುತ್ತಿದ್ದಾರೆ.

ಇನ್ನು ಮಗ ಸಚಿವ ಸಂಪುಟದಲ್ಲಿ ಸ್ಥಾನ ಪಡೆದಿರುವ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಈ ದಂಪತಿ, ಈ ಹಿಂದೆ ನಮ್ಮ ಪುತ್ರ ರಾಜ್ಯಾಧ್ಯಕ್ಷರಾಗಿದ್ದರು. ಈಗ ಕೇಂದ್ರ ಸಚಿವರಾಗಿದ್ದಾರೆ. ಈಗಿರುವ ಹುದ್ದೆ ರಾಜ್ಯಾಧ್ಯಕ್ಷ ಹುದ್ದೆಗಿಂತಲೂ ದೊಡ್ಡದೇ ಎಂದು ಮುಗ್ಧವಾಗಿ ಪ್ರಶ್ನಿಸುತ್ತಾರೆ. ನಮ್ಮ ಪುತ್ರ ಇಷ್ಟು ಎತ್ತರಕ್ಕೇರಿರುವುದರಲ್ಲಿ ನಮ್ಮದೇನೂ ಪಾತ್ರವಿಲ್ಲ. ಅವನ ಸ್ವಯಂ ಶ್ರಮದಿಂದಲೇ ಅವನು ಈ ಸ್ಥಾನಕ್ಕೇರಿದ್ದಾನೆ ಎಂಬ ವಿನಮ್ರ ಭಾವ ಅವರದ್ದು.

## 23 ತಿಂಗಳುಗಳಲ್ಲಿ 1 ಲಕ್ಷ ಹಳ್ಳಿಗಳ ಪ್ರತಿ ಮನೆಗೆ ತಲುಪಿದೆ ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ ಯೋಜನೆ

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಜಲ ಜೀವನ್ ಮಿಷನ್ ದೇಶಾದ್ಯಂತ 1 ಲಕ್ಷ ಹಳ್ಳಿಗಳಲ್ಲಿನ ಪ್ರತಿಯೊಂದು ಮನೆಗೂ ಕೇವಲ 23 ತಿಂಗಳುಗಳಲ್ಲಿ ತಲುಪುವ ಮೂಲಕ ಹೊಸ ಮೈಲಿಗಲ್ಲು ಸಾಧಿಸಿದೆ.

Har Ghar Jal
Jal Jeevan Mission

ಈ ಯೋಜನೆಯ ಆರಂಭದ ಸಂದರ್ಭದಲ್ಲಿ ದೇಶದ 18.94 ಕೋಟಿಗಳಷ್ಟು ಗ್ರಾಮೀಣ ಭಾಗದ ಕುಟುಂಬಗಳ ಪೈಕಿ ಕೇವಲ 3.28 ಕೋಟಿ ಕುಟುಂಬಗಳು ಮಾತ್ರವೇ ನಲ್ಲಿ ನೀರಿನ ಸಂಪರ್ಕ ಹೊಂದಿದ್ದವು. ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಲ ಜೀವನ್ ಮಿಷನ್ ಯೋಜನೆ ಜಾರಿಯಾದ ಬಳಿಕ ದೇಶದ 40% ಅಂದರೆ 7.72 ಕೋಟಿ ಕುಟುಂಬಗಳ ಮನೆ ಬಾಗಿಲಿಗೆ ನಲ್ಲಿ ನೀರಿನ ಸೌಲಭ್ಯ ದೊರೆಯುವಂತಾಗಿದೆ. ಗೋವಾ, ತೆಲಂಗಾಣ, ಅಂಡಮಾನ್ ಮತ್ತು ನಿಕೋಬಾರ್, ಪುದುಚೇರಿಗಳಲ್ಲಿನ ಗ್ರಾಮೀಣ ಭಾಗಗಳ ಜನರಿಗೂ ಈ ಸೇವೆ ತಲುಪುವ ಮೂಲಕ ಉದ್ದೇಶಿತ ಗುರಿ ಸಾಧಿಸಿದೆ. ಪ್ರಧಾನಿ ಮೋದಿ ಅವರು 2019 ರ ಆಗಸ್ಟ್ 15 ರಂದು ಪ್ರಾರಂಭವಾದ ಈ ಯೋಜನೆ ದೇಶದ ಪ್ರತಿಯೊಂದು ಕುಟುಂಬಕ್ಕೂ ನಲ್ಲಿಯ ಮೂಲಕ ಶುದ್ಧ ಕುಡಿಯುವ ನೀರನ್ನು ಒದಗಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ. ಇದಕ್ಕಾಗಿ 3.60 ಲಕ್ಷ ಕೋಟಿ ರೂ. ಗಳನ್ನು ಮೀಸಲಿಡುವ ಮೂಲಕ ಗ್ರಾಮೀಣ ಭಾಗದ ಜನಸಾಮಾನ್ಯರ ನೀರಿನ ಸಮಸ್ಯೆ ಪರಿಹರಿಸಲು ಕೇಂದ್ರದ ಬಿಜೆಪಿ ಸರ್ಕಾರ ಪಣ ತೊಟ್ಟಿದೆ.

## ಬಕ್ರೀದ್ ಹಬ್ಬದ ಪ್ರಯುಕ್ತ ಕೋವಿಡ್ ನಿಯಮ ಸಡಿಲಿಸಿದ ಕೇರಳ ಸರ್ಕಾರ ಧಾರ್ಮಿಕ ಯಾತ್ರೆ ರದ್ದುಗೊಳಿಸಿದ ಉತ್ತರಾಖಂಡ್ ಸರ್ಕಾರ



ಮುಸ್ಲಿಂ ಓಲೈಕೆ ರಾಜಕಾರಣಕ್ಕೆ ಪೂರಕ ಎಂಬಂತೆ ಕೇರಳದ ಸಿಎಂ ಪಿಣರಾಯಿ ವಿಜಯನ್ ಸರ್ಕಾರ, ಕೊರೋನಾ ಸಂಕಷ್ಟದ ಸಂದರ್ಭದಲ್ಲಿಯೂ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಕುರ್ಬಾನಿ ಆಚರಿಸಲು ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯದಲ್ಲಿ ಈವರೆಗೆ ವಿಧಿಸಲಾಗಿದ್ದ ಕೊರೋನಾ ನಿರ್ಬಂಧಗಳನ್ನು ಸಡಿಲಗೊಳಿಸಿದೆ. ಕೇರಳದಲ್ಲಿ ಕೊರೋನಾ ಸೋಂಕಿನ ತೀವ್ರತೆ ಇತರ ರಾಜ್ಯಗಳಿಗಿಂತ ಹೆಚ್ಚಾಗಿದ್ದು, ದಿನಕ್ಕೆ ಸುಮಾರು 13 ಸಾವಿರಗಳಷ್ಟು ಪ್ರಕರಣಗಳು ದಾಖಲಾಗುತ್ತಿದ್ದರೂ, ಬಕ್ರೀದ್ ಆಚರಣೆಗಾಗಿ ಕೊರೋನಾ ನಿಯಮಗಳನ್ನು ಸಡಿಲಿಸುವ ಮೂಲಕ ಸಾರ್ವಜನಿಕರ ಆರೋಗ್ಯದ ಜತೆ ಸರ್ಕಾರ ಚೆಲ್ಲಾಟ ಆಡುತ್ತಿದೆ ಎಂಬ ಟೀಕೆ ಎಲ್ಲೆಡೆ ವ್ಯಕ್ತವಾಗಿದೆ.



ಕೊರೋನಾ ಮೂರನೇ ಅಲೆಯ ಭೀತಿಯಿಂದ ಉತ್ತರಾಖಂಡ್ ರಾಜ್ಯ ಕನ್ವರ್ ಯಾತ್ರೆಯನ್ನು ಅಲ್ಲಿನ ಬಿಜೆಪಿ ಸರ್ಕಾರ ರದ್ದು ಮಾಡಿದೆ. ಅಲ್ಲಿ ದೈನಂದಿನ ಪ್ರಕರಣ ಕೇವಲ 48. ರಾಜ್ಯದ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿದ ಬಳಿಕ ಅಲ್ಲಿನ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಈ ಮಹತ್ವದ ನಿರ್ಣಯ ಪ್ರಕಟಿಸಿದ್ದಾರೆ. ಆದರೆ ಕೇರಳ ರಾಜ್ಯದಲ್ಲಿ ದೇಶದ ಒಟ್ಟು ಕೊರೋನಾ ಸರಾಸರಿ ಪೈಕಿ 30% ಕ್ಕಿಂತಲೂ ಅಧಿಕ ಪ್ರಕರಣಗಳಿದ್ದರೂ, ಬಕ್ರೀದ್‌ಗಾಗಿ ಕೊರೋನಾ ನಿಯಮಗಳನ್ನು ಸಡಿಲಗೊಳಿಸುವ ಮೂಲಕ ಒಂದು ವರ್ಗವನ್ನು ಓಲೈಸಲು ಮುಂದಾಗಿದೆ.

ಕೇರಳ ಸರ್ಕಾರದ ಈ ನಡೆಯಿಂದ ಕೊರೋನಾ ಸೋಂಕು ಏರಿಕೆಯಾಗುವ ಎಚ್ಚರಿಕೆಯನ್ನೂ ತಜ್ಞರು ನೀಡಿದ್ದಾರೆ. ಸರ್ಕಾರದ ನಿರ್ಣಯ ಇದೀಗ ಜನರಲ್ಲಿ ಹೊಸ ಆತಂಕವನ್ನು ಸೃಷ್ಟಿ ಮಾಡಿದೆ. ಸರ್ಕಾರದ ಈ ನಡೆಯಿಂದ ಕೊರೋನಾ ಸೋಂಕು ಮತ್ತಷ್ಟು ಏರಿಕೆಯಾದಲ್ಲಿ ಕಠಿಣ ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನು ಸುಪ್ರೀಂ ಕೋರ್ಟ್ ಕೇರಳ ಸರ್ಕಾರಕ್ಕೆ ನೀಡಿದೆ.

## ದೇಶದ ಮೊದಲ ಖಾಸಗಿ ದ್ರವೀಕೃತ ನೈಸರ್ಗಿಕ ಅನಿಲ ಘಟಕಕ್ಕೆ ಚಾಲನೆ



ದೇಶದ ಮೊದಲ ಖಾಸಗಿ ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಘಟಕವನ್ನು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಉದ್ಘಾಟಿಸಿದ್ದಾರೆ. ಒಟ್ಟಾರೆ ಸಾಗಾಟ ವೆಚ್ಚವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಇದು ಪೂರಕವಾಗಲಿದೆ. ಜೊತೆಗೆ ಶುದ್ಧ ಹಾಗೂ ಕಡಿಮೆ ವೆಚ್ಚದಲ್ಲಿ ಅನಿಲವನ್ನು ಇದು ಒದಗಿಸಿ ಕೊಡಲಿದೆ. ಹಾಗೆಯೇ ಹಲವು ಉದ್ಯೋಗಾವಕಾಶ ಸೃಷ್ಟಿಗೂ ಇದು ಪೂರಕವಾಗಿರಲಿದೆ. ಒಟ್ಟಿನಲ್ಲಿ ಸಾರಿಗೆ ವಲಯಕ್ಕೆ ಸಂಬಂಧಿಸಿದಂತೆ ಭವಿಷ್ಯದಲ್ಲಿ ಇದೊಂದು ಕ್ರಾಂತಿಕಾರಿ ನಡೆಯಾಗಲಿದೆ ಎಂದು ಅವರು ತಿಳಿಸಿದ್ದಾರೆ. ಎಥನಾಲ್, ವಿದ್ಯುತ್, ಸಂಕುಚಿತ ನೈಸರ್ಗಿಕ ಅನಿಲ, ದ್ರವೀಕೃತ ನೈಸರ್ಗಿಕ ಅನಿಲ ಮುಂತಾದವುಗಳನ್ನು ಸಾಂಪ್ರದಾಯಿಕ ಇಂಧನಗಳಿಗೆ ಪರ್ಯಾಯವಾಗಿ ಬಳಕೆ ಮಾಡಬಹುದು. ಕೃಷಿ ಉತ್ಪನ್ನಗಳ ಜೈವಿಕ ಎಥನಾಲ್ ಪ್ರಯೋಗ ಯಶಸ್ವಿಯಾಗಿದ್ದು, ಇದೊಂದು ಮಹತ್ವದ ಸಾಧನೆಯಾಗಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪೆಟ್ರೋಲ್, ಡೀಸೆಲ್ ಮೇಲಿನ ಅವಲಂಬನೆ ಕಡಿಮೆ ಮಾಡಿ ವಿದೇಶಿ ವಿನಿಮಯ ಉಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ತೀವ್ರ ಪ್ರಯತ್ನ ಮಾಡುತ್ತಿದ್ದು, ಖಾಸಗಿ ಕಂಪೆನಿಗಳಿಗೆ ಪ್ರೋತ್ಸಾಹ ಕೊಡುತ್ತಿದೆ.

## 2-ಡಿಜಿ ಕೊರೋನಾ ಔಷಧ ತಯಾರಿಸಲು ಮ್ಯಾನ್‌ಕೈಂಡ್ ಫಾರ್ಮಾಗೆ ಡಿಆರ್‌ಡಿಒ ಲೈಸೆನ್ಸ್




ಮ್ಯಾನ್‌ಕೈಂಡ್ ಫಾರ್ಮಾ ಎಂಬ ಔಷಧ ತಯಾರಿಕಾ ಸಂಸ್ಥೆಯು ಕೊರೋನಾ ಚಿಕಿತ್ಸೆಗೆ ಬಳಕೆ ಮಾಡುವ ಓರಲ್ ಡಿಯೋಕ್ಸಿ ಡಿ ಗ್ಲೂಕೋಸ್ (2-ಡಿಜಿ) ತಯಾರಿಸಲು ಮತ್ತು ಮಾರಾಟ ಮಾಡಲು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಯಿಂದ ಪರವಾನಗಿ ಪಡೆದಿದೆ. ಈ ಔಷಧವನ್ನು ಡಿಆರ್‌ಡಿಒ ಅಭಿವೃದ್ಧಿ ಮಾಡಿದ್ದು ಡಾ. ರೆಡ್ಡೀಸ್ ಪ್ರಯೋಗಾಲಯಗಳ ಸಹಯೋಗದಲ್ಲಿ ಡಿಆರ್‌ಡಿಒ ನ ಇನ್ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯರ್ ಮೆಡಿಸಿನ್ ಮತ್ತು ಅಲೈಡ್ ಸೈನ್ಸ್ ಪ್ರಯೋಗಾಲಯದಲ್ಲಿ ಕ್ಲಿನಿಕಲ್ ಟ್ರಯಲ್‌ಗಳನ್ನು ನಡೆಸಿರುವುದಾಗಿ ಮ್ಯಾನ್‌ಕೈಂಡ್ ಫಾರ್ಮಾ ತಿಳಿಸಿದೆ.

ಈ ಔಷಧಿಯನ್ನು ಸಂಸ್ಥೆಯು ತನ್ನ ವಿಶಾಖಪಟ್ಟಣ ಮತ್ತು ಹಿಮಾಚಲ ಪ್ರದೇಶದ ಕಾರ್ಖಾನೆಗಳಲ್ಲಿ ತಯಾರಿಸಲಿದೆ. ಈ ಔಷಧವು ಕೊರೋನಾ ರೋಗಿಗಳನ್ನು ಶೀಘ್ರ ಚೇತರಿಸುವಂತೆ ಮಾಡುವಲ್ಲಿ ಹೆಚ್ಚು ಶಕ್ತಿಶಾಲಿಯಾಗಿದ್ದು, ಆಕ್ಸಿಜನ್ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಎಂದು ಸಂಸ್ಥೆ ಹೇಳಿದೆ.

## ಪಶ್ಚಿಮ ಬಂಗಾಳದಲ್ಲಿ ಸಂವಿಧಾನವನ್ನು ಗಾಳಿಗೆ ತೂರಲಾಗಿದೆ: ಮಾನವ ಹಕ್ಕು ಆಯೋಗ



ಪಶ್ಚಿಮ ಬಂಗಾಳದಲ್ಲಿ ಅಧಿಕಾರದಲ್ಲಿರುವ ರಾಜಕಾರಣಿಗಳ ಮರ್ಜಿಗನುಗುಣವಾಗಿ ಆಡಳಿತ ನಡೆಯುತ್ತಿದ್ದು ಸಂವಿಧಾನವನ್ನು ಸಂಪೂರ್ಣವಾಗಿ ಗಾಳಿಗೆ ತೂರಲಾಗಿದೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಕೊಲ್ಕತ್ತಾ ಹೈಕೋರ್ಟ್‌ಗೆ ವರದಿ ನೀಡಿದೆ. ಪಶ್ಚಿಮ ಬಂಗಾಳದಲ್ಲಿ ಚುನಾವಣೋತ್ತರ ಹಿಂಸಾಚಾರದ ಬಗ್ಗೆ ವರದಿ ಸಲ್ಲಿಸುವಂತೆ ಎನ್‌ಎಚ್‌ಆರ್‌ಸಿಗೆ ಹೈಕೋರ್ಟ್ ಸೂಚಿಸಿತ್ತು. ಈ ಹಿನ್ನೆಲೆಯಲ್ಲಿ ಆಯೋಗವು ಅಗತ್ಯ ಅಧ್ಯಯನ ನಡೆಸಿ ವರದಿ ನೀಡಿದ್ದು, ಪಶ್ಚಿಮ ಬಂಗಾಳದಲ್ಲಿ ಶಾಸನಬದ್ಧ ನಿಯಮಗಳು ಮೂಲೆಗುಂಪಾಗಿರುವುದು ದೇಶದ ಸಂವಿಧಾನಕ್ಕೆ ಸಾವಿನ ಗಂಟೆಯಾಗಲಿದೆ ಎಂದು ಹೇಳಿದೆ.

ಈ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಡೆಸುವಂತೆಯೂ ಎನ್‌ಎಚ್‌ಆರ್‌ಸಿ ವರದಿಯಲ್ಲಿ ತಿಳಿಸಿದೆ. ಕೊಲೆ, ಅತ್ಯಾಚಾರ, ಕಿರುಕುಳ, ಹಿಂಸಾಚಾರ ಇದ್ಯಾವುದೂ ಆಡಳಿತಕ್ಕೆ ತಿಳಿಯದೆ ನಡೆಯುವ ಕೆಲಸಗಳಲ್ಲ. ಇವೆಲ್ಲವನ್ನೂ ಎದುರಾಳಿ ಪಕ್ಷದ ನಿರ್ದಿಷ್ಟ ವ್ಯಕ್ತಿಯನ್ನೇ ಗುರಿಯಾಗಿಸಿ ನಡೆಸಲಾಗಿದೆ. ಇದು ಪ್ರತೀಕಾರದ ಉದ್ದೇಶ ಹೊಂದಿದ್ದು, ಈ ನಿಟ್ಟಿನಲ್ಲಿ ತನಿಖೆ ನಡೆಯಬೇಕು ಎಂದು ಅದು ತನ್ನ 50 ಪುಟಗಳ ವರದಿಯಲ್ಲಿ ಉಲ್ಲೇಖಿಸಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.